ಅದಕ್ಕೋಸ್ಕರ ನಾಳೆ ಇದು ಆದಮೇಲೆ ಮುಂದಿನ ವರ್ಷಕ್ಕಾದರೂ ೧೯೯೫-೯೫ನೇ ಸಾಲಿನಲ್ಲಿ ಖಂಡಿತ ವಾಗಿಯೂ ಒನ್‌ಥರ್ಡ್ ಗ್ರಾಂಟನ್ನು ಪ್ರೊವೈಡ್ ಮಾಡೇಮಾಡುತ್ತೇನೆ ಎಂಬ ಸ್ಪಷ್ಟವಾದಂಥ ಆಶ್ವಾಸನೆ

ಓ-ರಿಗೆ ಪಿ. ಎಂ.

ಯನ್ನು ತಾವು ಕೊಡಬೇಕು. ಮತ್ತು ಈಗ ಇಟ್ಟಿರತಕ್ಕ ಹಣ ಎಷ್ಟು, ಮೂರನೇ ಒಂದು ಜಾಸ್ತಿ ಆಗುವಂಥ ಸಂದರ್ಭದಲ್ಲಿ ತಾವು ಏನು ಮಾಡುತ್ತೀರಿ ?

ಶ್ರೀ ಎಸ್. ಎಂ. ಯಾಹ್ಯಾ,—ಇದು ೧೯೯೫-೯೫ರಲ್ಲಿ ಸ್ಥಾಪನೆಯಾಗಿದೆ. ಇದಕ್ಕೆ ಯಾರೋ ದಾನಿಗಳು ಆರು ಎಕರೆ ಭೂಮಿಯನ್ನೂ ಕೊಟ್ಟಿದ್ದಾರೆ. ಶ್ರೀ ಬಸಪ್ಪ ಮಲ್ಲಪ್ಪ ಶ್ರೀನಿವಾಸಶೆಟ್ಟಿ ಅವರ ಹೆಸರಿನಲ್ಲಿಯೇ ಕಾಲೇಜು ಇಡುವುದಕ್ಕೆ ನಾವು ತಯಾರಿದ್ದೇವೆ. ಇದುವರೆಗೂ ಹೆಚ್ಚು ಹಣವನ್ನು ಒದಗಿಸಿದ್ದೆವು. ಆದರೆ, ಇದು ನಮ್ಮ ಪೊಸಿಷನ್‌ಗೆ ಬರಲಿಲ್ಲ.

ಶ್ರೀ ಟಿ. ಬಿ. ಜಯಚಂದ್ರ.—ರಿಜಿಸ್ಟರ್ಡ್ ಮಾಡಿಸಿಕೊಟ್ಟಿದ್ದೇವೆ, ಡಾಕ್ಯುಮೆಂಟ್ಸ್‌ಕೂಡ ಕಳುಹಿಸಿ ಕೊಟ್ಟಿದ್ದೇವೆ.

ಶ್ರೀ ಎಸ್. ಎಂ. ಯಾಹ್ಯಾ.—ನಿನ್ನೆ, ಮೊನ್ನೆ ಮಾತು ಹೇಳಬೇಡಿ, ಆ ವಿಷಯ ನನಗೆ ಗೊತ್ತಿಲ್ಲ. ನಾನು ಒಂದು ವಾರದ ಮಾತು ಹೇಳುತ್ತಿದ್ದೇನೆ. ಇವತ್ತಿನವರೆಗೆ ಪೊಸಿಷನ್ ಬಂದಿಲ್ಲ. ಪೊಸಿಷನ್ ಬಂದಮೇಲೆ, ಪ್ಲಾನ್, ಎಸ್ಟಿಮೇಟ್ ಮಾಡಬೇಕಾಗುತ್ತದೆ. ಪ್ಲಾನ್ ಎಸ್ಟಿಮೇಟ್ ಇದುವರೆಗೆ ಆಗದ ಕಾರಣ ಈ ಬಜೆಟ್‌ನಲ್ಲಿ ಹೆಚ್ಚು ಹಣವನ್ನು ಇಡುವುದಕ್ಕೆ ಸಾಧ್ಯವಾಗಲಿಲ್ಲ. ನಾಮಿನಲ್ ಆಗಿ ಎರಡು ಲಕ್ಷ ಮಾತ್ರ ಇಟ್ಟಿದ್ದೇವೆ. ಪ್ಲಾನ್ ಎಸ್ಟಿಮೇಟ್ ಆದಮೇಲೆ, ಮೂರನೇ ಒಂದು ಇರಬೇಕೆಂದೇನೂ ಇಲ್ಲ, ಮೂರನೇ ಒಂದು ಬೇಕಾದರೆ, ಮೂರನೇ ಒಂದರಷ್ಟೇ ಮಾಡಿಕೊಟ್ಟು, ಅಡ್ಮಿನಿಸ್ಟ್ರೇಟೀವ್ ಸ್ಯಾಂಕ್ಷನ್ ಒದಗಿಸಿಕೊಡುತ್ತೇವೆ.

ಶ್ರೀ ಟಿ. ಬಿ. ಜಯಚಂದ್ರ.—ಧನ್ಯವಾದಗಳು. ಹಿಂದಿನ ವರ್ಷವೂ ಯೂನಿವರ್ಸಿಟಿಗೆ ಪ್ರಪೋಸಲ್ ಹೋಗಿದೆ. ಆದ್ದರಿಂದ, ಈ ವರ್ಷವಾದರೂ ಕೊಡುತ್ತೇವೆ ಎನ್ನುವ ಬಗ್ಗೆ ದಯವಿಟ್ಟು ಮಾಡಿ ಆಸಕ್ತಿ ವಹಿಸಿ, ಕೊಡಿಸಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ

ಶ್ರೀ ಎಸ್. ಎಂ. ಯಾಹ್ಯಾ.—ವಿಚಾರ ಮಾಡುತ್ತೇನೆ.

ಶಿಕ್ಷಣ ಇಲಾಖೆಗಳ ವಿಂಗಡಣೆ

೨೮೨ (೭೩೦) ಶ್ರೀ ಎಂ. ಎಸ್. ಆತ್ಮಾನಂದ (ಮಂಡ್ಯ).—ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :—

ಅ) ಪ್ರಾಥಮಿಕ ಶಿಕ್ಷಣ ಮತ್ತು ಪ್ರೌಢ ಶಿಕ್ಷಣ ಇಲಾಖೆಗಳನ್ನು ಪುನರ್ ವಿಂಗಡಣೆ ಮಾಡುವ ವಿಷಯ ಸರ್ಕಾರದ ಪರಿಶೀಲನೆಯಲ್ಲಿದೆಯೇ ?

ಆ) ಹಾಗಿದ್ದಲ್ಲಿ ಆ ಪ್ರಸ್ತಾವನೆ ಯಾವ ಹಂತದಲ್ಲಿದೆ ?

ಇ) ಮಂಡ್ಯ ಜಿಲ್ಲೆಯಲ್ಲಿನ ವಿದ್ಯಾಮಟ್ಟವನ್ನು ಸುಧಾರಿಸಲು ವಿಶೇಷ ಯೋಜನೆ ಏನಾದರೂ ಅನುಷ್ಠಾನಕ್ಕೆ ಬರಲಿದೆಯೇ ?

ಶ್ರೀಮತಿ ನಾಗಮ್ಮ ಪಿ. ಕೇಶವಮೂರ್ತಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವೆಯರು),—

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಇ) ವಿಶ್ವಬ್ಯಾಂಕ್ ನೆರವಿನ "ಜಿಲ್ಲಾ ಪ್ರಾಥಮಿಕ ಶಿಕ್ಷಣ ಕಾರ್ಯಕ್ರಮವನ್ನು" ರಾಜ್ಯದ ನಾಲ್ಕು ಜಿಲ್ಲೆಗಳಲ್ಲಿ ಜಾರಿಗೆ ತರಲು ಉದ್ದೇಶಿಸಿದ್ದು, ಆದರಲ್ಲಿ ಮಂಡ್ಯ ಜಿಲ್ಲೆಯೂ ಒಂದಾಗಿದೆ.

ಶ್ರೀ ಎಂ. ಎಸ್. ಆತ್ಮಾನಂದ.—ಮಾನ್ಯ ಅಧ್ಯಕ್ಷರೇ, ಉತ್ತರದಲ್ಲಿ ಮಾನ್ಯ ಮಂತ್ರಿಗಳು ಪ್ರಾಥಮಿಕ ಶಿಕ್ಷಣ ಮತ್ತು ಪ್ರೌಢ ಶಿಕ್ಷಣ ಇಲಾಖೆಗಳನ್ನು ಪುನರ್ ವಿಂಗಡಣೆ ಮಾಡುವ ವಿಷಯು ಸರ್ಕಾರದ ಪರಿಶೀಲನೆಯಲ್ಲಿ ಇಲ್ಲವೆಂದು ಹೇಳಿದ್ದಾರೆ. ದಿನೇದಿನೇ ಪ್ರಾಥಮಿಕ ಶಾಲೆಗಳ ಸಂಖ್ಯೆ ಮತ್ತು ಪ್ರೌಢ ಶಾಲೆಗಳ ಸಂಖ್ಯೆ ಹೆಚ್ಚಾಗುತ್ತಿದ್ದು, ಇದರ ಉಸ್ತುವಾರಿ ಹೊತ್ತಿರತಕ್ಕ ತಾಲ್ಲೂಕು ವಿದ್ಯಾಧಿಕಾರಿಗಳು ಮತ್ತು ಡಿ.ಡಿ.ಪಿ.ಐ.ಗಳಿಗೆ ತುಂಬಾ ಭಾರವಾಗುತ್ತಿದೆ. ಒಬ್ಬ ವ್ಯಕ್ತಿ ಸುಮಾರು ೩೦೦-೪೦೦ ಶಾಲೆಗಳನ್ನು ನೋಡತಕ್ಕ ಪರಿಸ್ಥಿತಿ ಇದೆ. ಈ ಭಾರವನ್ನು ಅಥವಾ ಈ ಕಾರ್ಯಕ್ಷೇತ್ರವನ್ನು ಕಡಿಮೆ ಮಾಡಲು ಏನು ಕಾರ್ಯಕ್ರಮ ತೆಗೆದುಕೊಳ್ಳುತ್ತೀರಿ ಎಂದು ಕೇಳಬಯಸುತ್ತೇನೆ. ಆದೇರೀತಿ ತಾಲ್ಲೂಕು ವಿದ್ಯಾ ಇಲಾಖೆಗೆ ವಾಹನ ಸೌಕರ್ಯವನ್ನು ಒದಗಿಸಿಕೊಟ್ಟರೆ, ವಿದ್ಯಾ ಇಲಾಖೆಯಲ್ಲಿ ಅರ್ಥವತ್ತಾದ ಕೆಲಸ ಮಾಡಬಹುದು. ಆದಪ್ರಯುಕ್ತ ಈ ವ್ಯವಸ್ಥೆಯನ್ನೂ ಮಾಡಿಕೊಡುತ್ತೀರಾ ಎಂದು ಕೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀಮತಿ ನಾಗಮ್ಮ ಸಿ. ಕೇಶವಮೂರ್ತಿ.—ಮಾನ್ಯ ಅಧ್ಯಕ್ಷರೇ, ಒಟ್ಟಿನಲ್ಲಿ, ನಮ್ಮ ಇಡೀ ಸಾರ್ವಜನಿಕ ಶಿಕ್ಷಣ ಇಲಾಖೆಯನ್ನೇ ರೀ ಆರ್ಗನೈಸೇಷನ್ ಮಾಡತಕ್ಕ ಯೋಚನೆ ಸರ್ಕಾರದ ಪರಿಶೀಲನೆಯಲ್ಲಿದೆ. ಪ್ರಾಥಮಿಕ ಶಿಕ್ಷಣ ಇಲಾಖೆ ಮತ್ತು ಪ್ರೌಢ ಶಿಕ್ಷಣ ಇಲಾಖೆಗಳೇ ಬೇರೆ ಎಂದು ತೆಗೆದುಕೊಂಡು ರೀ ಆರ್ಗನೈಸ್ ಮಾಡುವ ಪ್ರಶ್ನೆ ಇಲ್ಲ. ಇಡೀ ಶಿಕ್ಷಣ ಇಲಾಖೆಯ ರೀ ಆರ್ಗನೈಸೇಷನ್ ಬಗ್ಗೆ, the proposal is being considered by the Government. ಮಾನ್ಯ ಸದಸ್ಯರು ಏನು ಹೇಳಿದ್ದೀರಿ ಅದು ಕೆಳಗಿನ ಹಂತದಲ್ಲಿ ಎ.ಇ.ಒ. ಆಫೀಸಿನಲ್ಲಿರಬಹುದು ಅಥವಾ ಡಿ.ಡಿ.ಪಿ.ಐ. ಆಫೀಸಿನಲ್ಲಿರಬಹುದು. ಅಲ್ಲೆಲ್ಲಾ ಸಾಕಷ್ಟು ಕೆಲಸ ಜಾಸ್ತಿಯಾಗಿದೆ. ಹಾಗೆಯೇ ಶಾಲೆಗಳ ಸಂಖ್ಯೆ ಕೂಡ ಜಾಸ್ತಿಯಾಗಿದೆ. ಇದೆಲ್ಲವನ್ನೂ ದೃಷ್ಟಿಯಲ್ಲಿಟ್ಟುಕೊಂಡು, ರೀ ಆರ್ಗನೈಸೇಷನ್ ಬಗ್ಗೆ ಪರಿಶೀಲಿಸಬೇಕಾಗಿದೆ. ಅದರಲ್ಲೂ ಕೆಳಗಿನ ಹಂತದಲ್ಲಿ ಹೆಚ್ಚಿನ ಸವಲತ್ತುಗಳನ್ನು ಕೊಡಬೇಕು, ಹೆಚ್ಚಿನ ಸಿಬ್ಬಂದಿಯನ್ನು ಕೊಡಬೇಕೆನ್ನುವುದರ ಬಗ್ಗೆ ಸರ್ಕಾರ ಪರಿಶೀಲನೆ ಮಾಡುತ್ತಿದೆ.

ಶ್ರೀ ಎಂ. ಎಸ್. ಆತ್ಮಾನಂದ.—ಮಂಡ್ಯ ಜಿಲ್ಲೆಯಲ್ಲಿ ಪ್ರಾಥಮಿಕ ಶಿಕ್ಷಣ ಕಾರ್ಯಕ್ರಮವನ್ನು ಹಮ್ಮಿಕೊಳ್ಳಬೇಕೆಂದು ತಮ್ಮ ಉತ್ತರದಲ್ಲಿ ತಿಳಿಸಿದ್ದೀರಿ. ಈ ಒಂದು ಪ್ರಾಥಮಿಕ ಶಿಕ್ಷಣ ಕಾರ್ಯಕ್ರಮದ ಉದ್ದೇಶ ಏನು, ಎಷ್ಟು ವರ್ಷದಲ್ಲಿ ಇದರ ಅನುಷ್ಠಾನವಾಗುತ್ತದೆ ಎನ್ನುವುದನ್ನು ಕೇಳಬಯಸುತ್ತೇನೆ.

ಶ್ರೀಮತಿ ನಾಗಮ್ಮ ಸಿ. ಕೇಶವಮೂರ್ತಿ.—ಈ ಕಾರ್ಯಕ್ರಮ ಬಹಳ ದೊಡ್ಡ ರೀತಿಯಲ್ಲಿ ಮಂಡ್ಯ ಜಿಲ್ಲೆಯಲ್ಲಿ ಬರುತ್ತಿದೆ ಎಂದು ಹೇಳುವುದಕ್ಕೆ ನನಗೆ ಸಂತೋಷವಾಗುತ್ತಿದೆ. ಇದರ ಹೆಸರು ಡಿಪಿಇಪಿ ಅಂದರೆ, ಡಿಸ್ಟ್ರಿಕ್ಟ್ ಪ್ರೈಮರಿ ಎಜುಕೇಷನ್ ಪ್ರೋಗ್ರಾಂ. ರಾಜ್ಯದ ನಾಲ್ಕು ಜಿಲ್ಲೆಗಳಲ್ಲಿ ಈ ಕಾರ್ಯಕ್ರಮವನ್ನು ತೆಗೆದುಕೊಳ್ಳುತ್ತಿದ್ದೇವೆ. ಮಂಡ್ಯ, ಕೋಲಾರ, ರಾಯಚೂರು ಮತ್ತು ಬೆಳಗಾಂ ಈ ನಾಲ್ಕು ಜಿಲ್ಲೆಗಳು. ಒಟ್ಟು ೪ ವಿಭಾಗಗಳಲ್ಲಿ, ಫೀಮೆಲ್ ಲಿಟರಿಸಿ ದೃಷ್ಟಿಯಲ್ಲಿಟ್ಟುಕೊಂಡು, ೪ ಜಿಲ್ಲೆಗಳನ್ನು ಆರಿಸಿದ್ದೇವೆ. ಈ ದಿನವೇ ಮಾನ್ಯ ಸದಸ್ಯರ ಈ ಪ್ರಶ್ನೆಯೂ ಬಂದಿದೆ, ಈ ದಿನವೇ ವಿಶ್ವಬ್ಯಾಂಕ್‌ನ ನೆರವನ್ನು ತೆಗೆದುಕೊಳ್ಳತಕ್ಕ ಪ್ರೋಗ್ರಾಂಗೆ ಅಂತಿಮವಾಗಿ ಡೆಲ್ಲಿಯಲ್ಲಿ ನಮ್ಮ ಅಧಿಕಾರಿಗಳು ಹೋಗಿ, ಸಹಿ ಹಾಕುತ್ತಿದ್ದಾರೆ. ಮತ್ತು ಮೊದಲನೇ ಕಂತು ಟೋಕನ್ ಗ್ರಾಂಟ್ ಎಂದರೂ, ಇವತ್ತೇ ೫೦ ಲಕ್ಷ ರೂಪಾಯಿಗಳನ್ನು ವಿಶ್ವಬ್ಯಾಂಕಿನವರು ಈ ಕಾರ್ಯಕ್ರಮಕ್ಕೆ ಬಿಡುಗಡೆ ಮಾಡಿದ್ದಾರೆಂದು ನನಗೆ ಸುದ್ದಿ ಬಂದಿದೆ. ಮತ್ತು ಒಂದೊಂದು ಜಿಲ್ಲೆಗೂ ೪೦ ಕೋಟಿ ರೂಪಾಯಿಗಳಷ್ಟು ಕಾರ್ಯಕ್ರಮದ ಅಡಿಯಲ್ಲಿ, ಮೂರು ವರ್ಷದಲ್ಲಿ ಈ ಕಾರ್ಯಕ್ರಮವನ್ನು ತೆಗೆದುಕೊಳ್ಳುತ್ತೇವೆ. ಇಲ್ಲಿ ಮುಖ್ಯವಾಗಿ ಒತ್ತು ಕೊಡತಕ್ಕಂಥಾದ್ದು ಹುಡುಗಿಯರ ಶಿಕ್ಷಣದ ಬಗ್ಗೆ. ಈ ೪೦ ಕೋಟಿ ರೂಪಾಯಿಗಳಲ್ಲಿ ಏನೇನು ಕಾರ್ಯಕ್ರಮ ಎಂದರೆ, ಮುಖ್ಯವಾಗಿ ಅಡಿಷನಲ್ ಟೀಚರ್ಸ್ ಕೊಡತಕ್ಕಂಥಾದ್ದು, ಟೀಚರ್ಸ್‌ಗೆ ಇಂಟೆನ್ಸೀವ್ ಟ್ರೈನಿಂಗ್ ಕೊಡತಕ್ಕಂಥಾದ್ದು, ಅಡಿಷನಲ್ ಸ್ಕೂಲ್ ರೂಮ್ಸ್, ಟೀಚಿಂಗ್ ಏಡ್ಸ್ ಮತ್ತು ಇತರೆ ಸಲಕರಣೆಗಳನ್ನು ಕೊಡುತ್ತೇವೆ. ಮತ್ತು ವಿಲೇಜ್ ಎಜುಕೇಷನ್ ಕಮಿಟಿ ಎಂದು ಮಾಡುತ್ತೇವೆ. ಈ ಕಾರ್ಯಕ್ರಮ ಬಹಳ ಎಫಿಕ್ಟೀವ್ ಆಗಿ ಬರಬೇಕಾದರೆ, ಇದು ಸರ್ಕಾರಿ ಕಾರ್ಯಕ್ರಮವಾಗಬಾರದು, ಇದು ಸಾರ್ವಜನಿಕರ ಕಾರ್ಯಕ್ರಮ ಆಗಬೇಕೆಂಬ ದೃಷ್ಟಿಯಿಂದ, ೪ ಜಿಲ್ಲೆಗಳಲ್ಲಿ ಪ್ರತಿಯೊಂದು ಹಳ್ಳಿಯಲ್ಲೂ ವಿಲೇಜ್ ಎಜುಕೇಷನ್ ಕಮಿಟಿ ಎಂದು ಪ್ರಾರಂಭ ಮಾಡಿ, ಅವರ ನೇತೃತ್ವದಲ್ಲಿ ಈ ಕಾರ್ಯಕ್ರಮವನ್ನು ಜಾರಿಗೆ ಕೊಡುವುದಕ್ಕೆ ರೂಪಿಸಿದ್ದೇವೆ. ಈ ಕಾರ್ಯಕ್ರಮಕ್ಕೆ Peoples Involvement, ಹಾಗೂ ಸಹಕಾರ ಬಹಳ ಮುಖ್ಯ. ಇಲ್ಲದೇ ಹೋದರೆ, ಈ ಕಾರ್ಯಕ್ರಮ ಯಶಸ್ವಿಯಾಗುವುದಿಲ್ಲವೆಂಬ ದೃಷ್ಟಿಯಿಂದ

ಈ ರೀತಿಯಲ್ಲಿ ಚಾರಿಗೆ ಕೊಡುತ್ತಿದ್ದೇವೆ. ಈಗ ನಮ್ಮ ಮುಂದಿರತಕ್ಕ ಶಿಕ್ಷಣದಲ್ಲಿ ನಾವೇನು ಗುರಿಯನ್ನಿಟ್ಟುಕೊಂಡಿದ್ದೇವೆ ಎಂದರೆ ೨ ಸಾವಿರ ಇಸವಿಯೊಳಗೆ, ಎಲ್ಲರಿಗೂ ಶಿಕ್ಷಣವನ್ನು ಕೊಡಬೇಕೆಂಬ ಗುರಿಯನ್ನು ಇಟ್ಟುಕೊಂಡಿದ್ದೇವೆ. ಈ ಕಾರ್ಯಕ್ರಮದನ್ವಯ ಮೂರು ಮುಖ್ಯ ಅಂಶಗಳು ಇವೆ. Access to all children, retention, ಹಾಜರಾತಿ ಮತ್ತು ದಾಖಲಾತಿ ಈ ನಾಲ್ಕು ಜಿಲ್ಲೆಗಳಲ್ಲಿ ಪ್ರಾಥಮಿಕ ಹಂತದಲ್ಲಿ ಎಲ್ಲಾ ಮಕ್ಕಳ ದಾಖಲಾತಿ ಆಗಬೇಕು ಮತ್ತು ಹಾಜರಾತಿ ಆಗಬೇಕು. ಮತ್ತು ರೀಟೆನ್‌ಷನ್ ಎಲ್ಲಾ ಮಕ್ಕಳನ್ನೂ ೪ ವರ್ಷದೊಳಗೆ ಅಂದರೆ, ನಾಲ್ಕನೇ ತರಗತಿಯವರೆಗಾದರೂ ಶಾಲೆಗಳಲ್ಲಿ ಗೈರುಹಾಜರಾಗದಹಾಗೆ ನೋಡಿಕೊಳ್ಳುತ್ತೇವೆ. ಮತ್ತು ಬಿಟ್ಟು ಹೋಗದಹಾಗೆ ನೋಡಿಕೊಳ್ಳುತ್ತೇವೆ. ಮತ್ತು ಕನಿಷ್ಟ ಕಲಿಕಾ ಮಟ್ಟ, minimum level of learning ಎಂದು ನಾವೇನು ಹೇಳುತ್ತೇವೆ, ಈ ಮೂರು ಅಂಶಗಳಿಗೆ ಒತ್ತುಕೊಟ್ಟು ಈ ಕಾರ್ಯಕ್ರಮವನ್ನು ರೂಪಿಸಿದ್ದೇವೆ. ಈ ಪ್ರಾಜೆಕ್ಟ್ ೭ ವರ್ಷಗಳ ಕಾಲ ಸತತವಾಗಿ ನಡೆಯುತ್ತದೆ. ತದನಂತರ, ಸರ್ಕಾರವೇ ಇದನ್ನು ವಹಿಸಿಕೊಂಡು ಮುಂದುವರಿಸಿಕೊಂಡು ಹೋಗಬೇಕೆಂದು ಯೋಜಿಸಿದೆ. ಈ ದೊಡ್ಡ ಕಾರ್ಯಕ್ರಮ ನಿಮ್ಮ ಜಿಲ್ಲೆಯಲ್ಲಿ ಬರುತ್ತಿರುವುದು ನನಗೆ ಬಹಳ ಸಂತೋಷವಾಗಿದೆ.

ಅಳಿವೆ ಬಾಗಿಲಿನಲ್ಲಿ ಹೂಳೆತ್ತುವ ಕಾರ್ಯ

೨೮೩. (೮೪೫) ಶ್ರೀ ಬಿ.ಎಂ. ಇದಿನಬ್ಬ (ಉಳ್ಳಾಲ).—ಮಾನ್ಯ ಬಂದರು ಮತ್ತು ಮೀನುಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ:—

ಅ) ಮಂಗಳೂರು ಅಳಿವೆ ಬಾಗಿಲಿನ ಹೂಳೆತ್ತುವ ಕಾರ್ಯದ ಉದ್ಘಾಟನೆ ೫-೨-೧೯೯೪ ರಂದು ಜರುಗಿದೆಯಲ್ಲವೇ ?

ಆ) ಆ ಬಳಿಕ ಈವರೆಗೆ ಪ್ರತಿ ದಿನವೂ ಹೂಳೆತ್ತುವ ಕೆಲಸ ಆಗಿದೆಯೇ ?

ಇ) ಈ ಹೂಳೆತ್ತುವ ಕಾರ್ಯ ಯಾವಾಗ ಮುಗಿಯಲಿದೆ ?

ಶ್ರೀ ವಸಂತ ಪಿ. ಸಾಲಿಯಾನ (ಬಂದರು ಮತ್ತು ಮೀನುಗಾರಿಕೆ ಸಚಿವರು).—

ಅ) ೪-೨-೧೯೯೪ರಂದು ಜರುಗಿದೆ.

ಆ) ಮಾರ್ಚ್ ೧೦ ರಿಂದ ಪ್ರತಿ ದಿನವು ಕೆಲಸವು ನಡೆಯುತ್ತಿದೆ.

ಇ) ೧೯೯೬ನೇ ಡಿಸೆಂಬರ್ ಸಮಯಕ್ಕೆ ಮುಗಿಯಲಿದೆ.

ಶ್ರೀ ಬಿ. ಎಂ. ಇದಿನಬ್ಬ.—ಸನ್ಮಾನ್ಯ ಅಧ್ಯಕ್ಷರೇ, ಮಂಗಳೂರು ಅಳಿವೆ ಬಾಗಿಲಿನಲ್ಲಿ ಕಳೆದ ೭-೮ ವರ್ಷಗಳಿಂದ ಹೂಳೆತ್ತದೇ ಇದ್ದುದರಿಂದ, ಅನೇಕ ನೌಕೆಗಳು ನಾಶವಾಗಿ, ೧೦-೧೫ ಜನರು ತೀರಿಹೋಗಿರುವುದಲ್ಲದೆ, ಕೋಟಿಗಟ್ಟಲೆ ನಷ್ಟವಾಗಿದೆ. ಈ ಹೂಳೆತ್ತುವ ಕೆಲಸವನ್ನು ತೆಗೆದುಕೊಳ್ಳಬೇಕೆಂದು ನಾವು ೪-೫ ವರ್ಷಗಳಿಂದ ಕೇಳಿವಾಗ, ಈಗಿನ ಮೀನುಗಾರಿಕಾ ಮಂತ್ರಿಗಳಾದ ಶ್ರೀ ವಸಂತ ಸಾಲಿಯಾನರವರ ಶತ ಪ್ರಯತ್ನದಿಂದ, ಈ ಬಾರಿ ಒಂದು ಡ್ರಡ್ಜರ್ ಬಂದಿದೆ. ಆಲ್ಲಿ ಕೆಲಸ ನಡೆಯುತ್ತಿದೆ. ದಿನಾಂಕ ೪-೨-೯೪ ರಂದು ಇದರ ಉದ್ಘಾಟನೆಯನ್ನು ಮಾನ್ಯ ಮುಖ್ಯ ಮಂತ್ರಿಗಳೇ ಮಾಡಿದ್ದಾರೆ. ಬಹಳ ಸಂತೋಷ. ಆದರೆ, ಈ ಯಂತ್ರ ೪-೨-೯೪ ರಿಂದ ಮಾರ್ಚ್ ೧೦ರವರೆಗೂ ಕೆಲಸ ಮಾಡದೇ ಇರುವುದಕ್ಕೆ ಕಾರಣ ಏನು ? ಅದು ಸುಮ್ಮನೆ ಬಿದ್ದಿದೆ ಎಂದು ಕೇಳಿದ್ದೇನೆ. ಇದಕ್ಕೆ ಏನಾದರೂ ಕಾರಣ ಇದೆಯೇ, ಇದು ಕೆಲಸ ಮಾಡಿದ್ದರೆ, ಇನ್ನೂ ಹೆಚ್ಚು ಕೆಲಸ ಆಗುತ್ತಿತ್ತು. ಇದು ಏನಾದರೂ ತಮ್ಮ ತಿಳುವಳಿಕೆಗೆ ಬಂದಿದೆಯೇ ಎಂದು ಕೇಳುತ್ತಿದ್ದೇನೆ.

ಶ್ರೀ ವಸಂತ ವಿ. ಸಾಲಿಯಾನ.—ಮಾನ್ಯ ಅಧ್ಯಕ್ಷರೇ, ೧೯೮೦ನೇ ಇಸವಿಯಿಂದ ೧೯೯೪ರ ವರೆಗೆ ಮಂಗಳೂರು ಅಳಿವೆ ಬಾಗಿಲಿನ ಹೂಳೆತ್ತುವ ಕಾರ್ಯಕ್ರಮ ಆಗಬೇಕಾಗಿತ್ತು. ಕಾರಣಾಂತರದಿಂದ ಆಗಲಿಲ್ಲ. ಆದರೆ, ಇತ್ತೀಚೆಗೆ ಅಂದರೆ, ದಿನಾಂಕ ೪-೨-೯೪ ರಂದು ಮಾನ್ಯಮುಖ್ಯಮಂತ್ರಿಗಳು ಈ ಯಂತ್ರದ ಉದ್ಘಾಟನೆ ಮಾಡಿ, ಹೂಳೆತ್ತುವ ಕಾರ್ಯಕ್ರಮವನ್ನು ಪ್ರಾರಂಭಿಸಿದ್ದಾರೆ. ಈಗ ಅಲ್ಲಿ ಸತತವಾಗಿ ಈ ಕಾರ್ಯಕ್ರಮ ನಡೆದಿದೆ. ಮಧ್ಯದಲ್ಲಿ ಒಂದೆರಡು ಯಂತ್ರದ ಭಾಗಗಳು ಅಂದರೆ, ಗೇರ್‌ಬಾಕ್ಸ್, ಕಂಪ್ರೆಸರ್ ಹಾಳಾದುದರಿಂದ, ಈ ಕಾರ್ಯಕ್ರಮ ಸ್ವಲ್ಪ ದಿವಸದ ಮಟ್ಟಿಗೆ ನಿಂತು ಹೋಯಿತು. ಈ ಭಾಗಗಳು ಮದ್ರಾಸಿನಿಂದ ಬರಬೇಕಾಗಿದ್ದು, ಇದರಿಂದ ಸ್ವಲ್ಪ ವಿಳಂಬವಾಯಿತು.